# ಏನೆಂದಳಯ್ಯ ಸೀತೆ ಹನುಮ ನಿನಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 142.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 147. In this, the lyrics are slightly different and are not considered here.
3. **Note:** Lyrics given here are as per Ref. 1. Singer has followed these lyrics. But has added one extra stanza, which is also given in grey highlights.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Gorebala Hanumantha Rayaru.
5. **Note:** Singer has followed these lyrics.

ರಾಗ: ನಾದನಾಮಕ್ರಿಯಾ ತಾಳ: ಝಂಪೆ

ಏನೆಂದಳಯ್ಯ ಸೀತೆ, ಹನುಮ ನಿನಗೆ
ಏನು ನುಡಿದಿಹಳು ಪ್ರೀತೆ ॥ ಪ ॥

ಚೆನ್ನಿಗ ಚೆಲುವನೆ ಕೇಳೋ ಜಾನಕಿಯು
ನಿನ್ನ ಬಿಟ್ಟಿರಲಾರಳು
ನಿನ್ನಿರುಳು ನೀ ನೀಲಕುಂತಳೆ ಕನಸಿನಲಿ
ಚೆನ್ನಾಗಿ ಕಂಡೆನೆಂದಳೊ ರಾಮ ॥ 1 ॥

ಸ್ವಾಮಿರಾಯರ ಪಾದವ, ಎಲೆ ಕಪಿಯೆ
ನಾನೆಂತು ಬಿಟ್ಟಿರಲಿ
ದಾನವನ ಶಿರವರಿದು ಲಂಕೆಯ ಪುರವನ್ನು
ದಹನವನು ಮಾಡೆಂದಳೊ ರಾಮ ॥ 2 ॥

ಎಲ್ಲಿಂದ ಬಂದೆ ಹನುಮ, ನೀಯೆನ್ನ
ಸೊಲ್ಲ ಕೇಳೋ ಪ್ರೇಮ

ವಲ್ಲಭನ ಕಾಣದೆ ನಿಮಿಷ ಯುಗವಾಗಿದೆ
ನಿಲ್ಲಲಾರೆ ಎಂದಳೊ ರಾಮ || 3 ||

ಚಿಂತಿಸುತ ಬಡವಾದಳೊ, ಜಾನಕಿಯು
ಕಾಂತಿ ಹೀನನಾಗಿಹಳೊ
ಅಂತರಂಗದಿ ಪ್ರಾಣಕಾಂತ ಕಾಂತ ಎನುತಲಿ
ಭ್ರಾಂತಿಲಿ ಮರುಗುತಿಹಳೊ ರಾಮ || 4 ||

ಅಂಜನೆಯ ತನಯ ಕೇಳೋ, ನೀ ಪೋಗಿ
ಕಂಜನಾಭನಿಗೆ ಹೇಳೊ
ಕುಂಜರನ ಕಾಯ್ದ ಶ್ರೀ ಪುರಂದರ ವಿಠಲನ್ನ
ಪಂಜರದ ಅರಗಿಣಿ ಎಂದಳೊ ರಾಮ || 5 ||

**Extra Stanza as per Singer:**

ದಾನವನ ಪುರದೊಳಗೆ ದಾರಿಯನು ನೋಡುತಲೆ
ಧ್ಯಾನವನು ಮಾಡುತಿಹಳೊ
ರಾವಣನ ಶಿರವರಿದು ಲಂಕ ಪಟ್ಟಣವನೆಲ್ಲ
ಹವನವ ಮಾಡಿಸು ಎಂದಳೊ ಹನುಮಾ || 4 ||

**Classification:** Keerthane
**Ankita:** sri purandara vittala
**Location:** NA
**Category:** Hanuma Stuti
**Sub-Category:** sita, hanuma, giLi, Ane, kanasu, koti, asura, lanke, rama, prema, priti, chinte,
**Pravachana:** NA
**Explanation:** NA